# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 85 / 2015

ಪಿರ್ಯಾದುದಾರರು ಃ ಕುದೂರು ಪೋಲಿಸ್‌ಠಾಣೆ

**ವಿರುದ್ಧ**

**ಆರೋಪಿಗಳು ಃ ಸಿದ್ದೇಗೌಡ ಬೀರಾದಾರ್**

**ಚಾಸಾ ಃ- 01 / ಪ್ರಾಸಾ ಃ- 08**

| | |
|---|---|
| ಹೆಸರು | **ವರಣೇಶ್** |
| ತಂದೆಯ / ಗಂಡನ ಹೆಸರು | **ರಾಜೇಗೌಡ** |
| ವಯಸ್ಸು | **36** |
| ಉದ್ಯೋಗ | **ಹೋಟೆಲ್ ಕ್ಯಾಸಿಯರ್** |
| ವಿಳಾಸ | **ಕಳ್ಳಿಮುದ್ದನಹಳ್ಳಿ, ಹಾಸನ** |

**ದಿನಾಂಕಃ 26-04-2022 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಆರೋಪಿಯು ಕೆ.ಎಸ್.ಆರ್.ಟಿ.ಸಿ. ಚಾಲಕನಾಗಿರುತ್ತಾರೆ. ಚಾಸಾ-2 ರಿಂದ ಚಾಸಾ-18 ನನಗೆ ಗೊತ್ತಿರುವುದಿಲ್ಲ. ದಿನಾಂಕಃ 21-04-2014 ರಂದು ಕಳ್ಳಿಮುದ್ದೇಹಹಳ್ಳಿ ಗ್ರಾಮದಿಂದ ಹೊಳೆನರಸೀಪುರ ಮೂಲಕ ಬೆಂಗಳೂರಿಗೆ ಬೆಳಿಗ್ಗೆ 11 ಗಂಟೆಗೆ ಕೆ.ಎಸ್.ಆರ್.ಟಿ.ಸಿ. ಬಸ್ ಸಂಖ್ಯೆ ಕೆಎ-13-ಎಫ್-1882 ರಲ್ಲಿ ಹೊರಟಿದ್ದು, ಮಧ್ಯಾಹ್ನ 2 ಗಂಟೆಯ ಸಮಯದಲ್ಲಿ ಸೋಲೂರಿನ ಡೈರಿಯ ಬಳಿ ಆರೋಪಿಯು ಅತಿವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಸದರಿ ಬಸ್ ಸರ್ವೀಸ್ ರಸ್ತೆಗೆ ಪಲ್ಟಿಯಾಗಿರುತ್ತದೆ. ಸದರಿ ಚಾಲಕ ಯಾರು ಎಂದು ನನಗೆ



ಗೊತ್ತಿಲ್ಲ, ನೋಡಿದರೆ ಗುರುತಿಸಲು ಆಗುವುದಿಲ್ಲ. ನಾನು ಕೂಡ ಕೆಳಗೆ ಬಿದ್ದಿದ್ದು, ನನಗೆ ಸಣ್ಣಪುಟ್ಟ ಗಾಯಗಾಳಾಗಿದ್ದು ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಡಲ್ಲ. ಎಲ್ಲರಿಗೂ ಸಣ್ಣಪುಟ್ಟ ಗಾಯಗಳಾಗಿದ್ದು, ಕೆಲವರನ್ನು ಅಂಬುಲೆನ್ಸ್ ಮೂಲಕ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಸಾಕ್ಷಿಯು ತಾನು

ನೀಡಿದ ದೂರನ್ನು ನೋಡಿ ಗುರುತಿಸಿದ್ದು, ಸಾಕ್ಷಿ ನೋಡಿ ಸಮ್ಮತಿಸಿದ ಕಾರಣ ಸದರಿ ದೂರನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಸದರಿ ವಿಚಾರವಾಗಿ ನಾನು ಮತ್ತೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ.

**ಪಾಟೀ ಸವಾಲು** ಃ- **ಶ್ರೀ. ಜಿ.ಎನ್.ಎಸ್.** ವಕೀಲರಿಂದ **ಆರೋಪಿ** ಪರವಾಗಿ ಃ-

ಆರೋಪಿ ಪರ ಯಾವುದೇ ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್? ಸಿ. ಮಾಗಡಿ.**